ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 17 ಚಾ ಸಾ 27

ಹೆಸರುಃ ಸೋನುಬಾಯಿ

ಗಂಡನ ಹೆಸರುಃ ಧನೇಶ್ವರ್

ವಯಸ್ಸುಃ 40 ವರ್ಷ

ಉದ್ಯೋಗಃ ಬಟ್ಟೆ ವ್ಯಾಪಾರ

ವಾಸಃ ಕೆ ಆರ್ ಎಸ್ , ಬಜಾರ್ ಲೈನ್ .

ದಿಃ 12.06.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಗಂಗಾರಾಮು ಮತ್ತು ಆತನ ಹೆಂಡತಿ ಮೃತ ಲಕ್ಷ್ಮೀ ಗೊತ್ತು. ಗಂಗಾರಾಮು ನನ್ನ ದೂರದ ಸಂಬಂಧಿ. ಲಕ್ಷ್ಮೀ ಮತ್ತು ಗಂಗಾರಾಮುಗೆ 3 ಜನ ಮಕ್ಕಳು. ಅವರೆಂದರೆ ರಾಜು , ಕೋಮಲ್ ಮತ್ತು ಕುನಾಲ್ . ಲಕ್ಷ್ಮೀಯ ಕುಟುಂಬ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇತ್ತು. ಸದರಿ ಲಕ್ಷ್ಮೀಯ ಕುಟುಂಬ ವಾಸ ಇದ್ದ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ

ಗಂಗಾರಾಮುವಿನ ತಾಯಿ ಮತ್ತು ಸಹೋದರರು ಅವರವರ ಕುಟುಂಬದ ಜೊತೆಯಲ್ಲಿ ವಾಸ ಇದ್ದರು.

2. ಗಂಗಾರಾಮು ಬಟ್ಟೆ ವ್ಯಾಪಾರ ಮಾಡಿಕೊಂಡು ತಿಂಗಳಿಗೆ ಒಂದು ಸಲ ಅಥವಾ ಎರಡು ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದ. ಆ ರೀತಿ ಆತ ವ್ಯಾಪಾರಕ್ಕೆ ಎಂದು ಹೊರಗೆ ಹೋದಾಗ ಮನೆಯಲ್ಲಿ ಲಕ್ಷ್ಮಿ ಮತ್ತು ಆಕೆಯ ಮಕ್ಕಳು ಇರುತ್ತಿದ್ದರು . ಅವರ ಜೊತೆಯಲ್ಲಿ ಗಣೇಶನ ಮಗ ಗೋವಿಂದ ಕೂಡ ಆ ಮನೆಯಲ್ಲಿ ವಾಸ ಮಾಡುತ್ತಿದ್ದ.

3. ಸುಮಾರು ಎರಡು ವರುಷದ ಹಿಂದೆ ಬೆಳಗ್ಗೆ 10 ಗಂಟೆಯಲ್ಲಿ ನಾನು ನನ್ನ ಮನೆಯಲ್ಲಿ ಇದ್ದಾಗ ಗಂಗಾರಾಮುವಿನ ಮನೆಯ ಬಳಿ ಗಲಾಟೆಯ ಶಬ್ದ ಕೇಳಿಸುತ್ತಿತ್ತು. ನಾನು ಹೋಗಿ ಗಂಗಾರಾಮುವಿನ ಮನೆಯಲ್ಲಿ ನೋಡಿದಾಗ ಲಕ್ಷ್ಮಿ , ಆಕೆಯ ಮೂರು ಮಕ್ಕಳು ಮತ್ತು ಗಣೇಶನ ಮಗನನ್ನು ಸಾಯಿಸಲಾಗಿತ್ತು.

4. ನಾನು ನೋಡಿದಾಗ ಲಕ್ಷ್ಮಿಯ ಹಣೆಗೆ ಏಟಾಗಿತ್ತು. ಮಕ್ಕಳುಗಳ ಮುಖದ ಭಾಗದಲ್ಲಿ ಮತ್ತು ಕಣ್ಣುಗಳಿಗೆ ಏಟುಗಳಾಗಿದ್ದವು.

5. ಆನಂತರ ಐದು ಶವಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ . ಆನಂತರ ನಾನು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದೇನೆ.

6. ದಿಃ 6.2.2022 ರಂದು ಲಕ್ಷ್ಮೀ ಮತ್ತು ಉಳಿದ ನಾಲ್ಕು ಜನ ಮಕ್ಕಳ ಶವವನ್ನು ನಾನು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ.

7. ಆ ರೀತಿ ನಾನು ಶವವನ್ನು ನೋಡಲು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಹೋದಾಗ ಅಲ್ಲಿಗೆ ಪೊಲೀಸರು ಬಂದಿದ್ದರು ಮತ್ತು ನನ್ನನ್ನು ವಿಚಾರಣೆ ಮಾಡಿದ್ದಾರೆ. ಆಗ ನಾನು ಲಕ್ಷ್ಮೀಯ ಗುರುತನ್ನು ತಿಳಿಸಿದ್ದೇನೆ.

8. ನಾನು ನೋಡಿದಾಗ ಲಕ್ಷ್ಮೀಯ ಹಣೆಗೆ ಗಾಯವಾಗಿತ್ತು. ಆಕೆಯ ಮೈಮೇಲೆ ಸೀರೆ, ರವಿಕೆ ಮತ್ತು ಒಳಉಡುಪುಗಳು ಇದ್ದವು. ಕಿವಿ, ಮೂಗು ಮತ್ತು ಕತ್ತಿನಲ್ಲಿ ಒಡವೆಗಳು ಮತ್ತು ಕಾಲಿನಲ್ಲಿ ಕಾಲುಚೈನುಗಳಿದ್ದವು. ಆ ಒಡವೆಗಳನ್ನು ಪೊಲೀಸರು

ಸಂಗ್ರಹಿಸಿಕೊಂಡು ಲಕ್ಷ್ಮಿಯ ಕಡೆಯವರಿಗೆ ಕೊಟ್ಟಿರುತ್ತಾರೆ.

9. ಆ ರೀತಿ ಲಕ್ಷ್ಮಿಯ ಶವದ ಮೇಲೆ ಪ್ರಕ್ರಿಯೆ ನಡೆಸಿದಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಮತ್ತು ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ.

10. ಆ ರೀತಿ ಪೊಲೀಸರು ಶವ ಪಂಚನಾಮೆ ಬರೆಯುವಾಗ ಈಗ ನೋಡಿದ 4 ಪೊಟೋಗಳನ್ನು ಈಗ ನೋಡಿದ ನಿಪಿ 30 ರಂತೆ ತೆಗೆದಿರುತ್ತಾರೆ.

11. ಲಕ್ಷ್ಮಿಯ ಶವವನ್ನು ನೋಡಿದಾಗ ಯಾವುದೋ ಆಯುಧದಿಂದ ಆಕೆಯ ತಲೆಗೆ ಜೋರಾಗಿ ಹೊಡೆದು ಆಕೆಯನ್ನು ಕ್ರೂರವಾಗಿ ಸಾಯಿಸಿದ್ದಾರೆ ಎಂದು ಕಂಡುಬಂತು.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

12. ನಾನು ಕೆ ಆರ್ ಆಸ್ಪತ್ರೆಗೆ ಮದ್ಯಾಹ್ನ 2 ಗಂಟೆಗೆ ಹೋಗಿ ಸಂಜೆ 4 ಗಂಟೆಯವರೆಗೆ ಇದ್ದೆ. ಪೊಲೀಸರು ಏನು ಬರೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)